**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.1/2022

**PW**. 4

**CW**. 8

**ಸಾಕ್ಷಿಯ ಹೆಸರು –ಎನ್ ಸುಬ್ರಮಣ್ಯ**

**ತಂದೆಯ ಹೆಸರು –ಕೆ ನಾರಾಯಣ**

**ವಯಸ್ಸು –45 ವರ್ಷಗಳು**

ದಿನಾಂಕ 06–06–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಗಾರೆ ಕೆಲಸ**

**ವಾಸಸ್ಥಳ –ದೊಡ್ಡಹೊಣ್ಣುರು ಕಾವಲು , ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2018 ನೇ ಸಾಲಿನಲ್ಲಿ ಮುತ್ತಗೂರು ಗ್ರಾಮದಲ್ಲಿ ನಾನು ಮತ್ತು ಚಾಸಾ–9 ವಾಸ ಮಾಡುತ್ತಿದ್ದೆವು. ನಮಗೆ ಸೇರಿದ ಮುತ್ತಗೂರು ಗ್ರಾಮದ ಸರ್ವೇ ನಂ 7 ರಲ್ಲಿ 3 ಎಕರೆ ಜಮೀನು ಇದೆ. ಸದರಿ ಜಮೀನಿನಲ್ಲಿ ಬಂಡೆ ಇದ್ದು, ಉಳುಮೆ ಮಾಡಲು ಸಾಧ್ಯವಾಗದೇ ಇದ್ದ ಕಾರಣ ಬಂಡೆಯನ್ನು ಒಡೆಯಲು ಆರೋಪಿಗೆ ನೀಡಿ, ನಾನು ಮತ್ತು ನನ್ನ ಸಹೋದರ ಚಾಸಾ–9 ರವರು ನೋಂದಾಯಿತಿ ಜಿ ಪಿ ಎ ಮಾಡಿಕೊಂಡಿದ್ದೆವು. ಆ ಬಗ್ಗೆ ಸದರಿ ಜಿ ಪಿ ಎ ನ ಜೆರಾಕ್ಸ ಪ್ರತಿಯನ್ನು ಈಗ ನೋಡುತ್ತಿದ್ದು, ಆರೋಪಿಯ ಒಪ್ಪಿಗೆ ಮೇರೆಗೆ ಅದನ್ನು ನಿಪಿ–4 ಎಂದು ಸಾಕ್ಷಿಯ ಸಹಿಯನ್ನು ನಿಪಿ–4(ಎ) ಗುರುತಿಸಲಾಯಿತು.

**SC No.1/2022**
**PW.4**

**ಪಾಟೀಸವಾಲುಃ– ಆರೋಪಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ–**

ನಾವು ಮತ್ತು ಆರೋಪಿ ಸ್ನೇಹಿತರು ಎಂದರೆ ಸರಿ . ಮುತ್ತಗೂರು ಗ್ರಾಮದ ಸರ್ವೇ ನಂ 7 ರಲ್ಲಿ 3 ಎಕರೆ ಜಮೀನನ್ನು ವ್ಯವಸಾಯ ಮಾಡಲು ಗುತ್ತಿಗೆ ನೀಡಿ ಜಿ ಪಿ ಎ ಬರೆದು ಕೊಟ್ಟಿದ್ದೆವು ಎಂದರೆ ಸರಿ .ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.